**Kannada Prabha**

**Date:** May 31, 2016 **Page No.**02

**Edition:** Mysuru **Language: Kannada**

# ಸೃಜನಶೀಲತೆ, ಸಮಸ್ಯೆ ಪರಿಹಾರ ಕುರಿತು ವಿಶೇಷ ಕಾರ್ಯಕ್ರಮ

• **ಕನ್ನಡಪ್ರಭ ವಾರ್ತೆ** ಮೈಸೂರು

ನಗರದ ಎಸ್‌ಡಿಎಂ- ಐಎಂಡಿ ಸಂಸ್ಥೆಯಲ್ಲಿ ಉದ್ಯಮ ವರ್ಗದ ಅಧಿಕಾರಿಗಳು, ಕಾರ್ಯ ನಿರ್ವಾಹಕರಿಗೆ ಸೃಜನಶೀಲತೆ ಮತ್ತು ಸಮಸ್ಯೆ ಪರಿಹಾರ ಕುರಿತು ನಿರ್ವಹಣ ಅಭಿವೃದ್ಧಿ ಕಾರ್ಯಕ್ರಮ ಇತ್ತೀಚೆಗೆ ನಡೆಯಿತು.

ಸಂಪನ್ಮೂಲ ವ್ಯಕ್ತಿಯಾಗಿದ್ದ ಸಂಸ್ಥೆಯ ಪ್ರಾಧ್ಯಾಪಕ ಡಾ.ಆರ್. ಜಗದೀಶ್ ಅವರು, ಸೃಜನಶೀಲತೆ, ಸಮಸ್ಯೆ ಪರಿಹಾರ ದಕ್ಷತೆ ಮತ್ತು ನಿರ್ವಹಣಾ ಕ್ಷೇತ್ರದಲ್ಲಿ ಅವುಗಳ ಪರಿಣಾಮ ಕುರಿತು ತಿಳಿಸಿಕೊಟ್ಟರು. ಸೃಜನಶೀಲತೆಯ ಮೌಲ್ಯಮಾಪನ ಹಾಗೂ ಸೃಜನಶೀಲತೆಗೆ ಇರುವ ಅಡೆತಡೆ ಬಗ್ಗೆ ಚರ್ಚಿಸಿದರು. ಪಾಠ, ಪ್ರಸ್ತುತಿಗಳು, ಆಟಗಳು, ಪ್ರಾಯೋಗಿಕ ಚಟುವಟಿಕೆಗಳು ಹಾಗೂ ಸಾಂದರ್ಭಿಕ ಸಂಗತಿಗಳ ಮೂಲಕ ಈ ಕಾರ್ಯಕ್ರಮವು ಮುಕ್ತಾಯವಾಯಿತು.

ಕಾರ್ಯಕ್ರಮ ಸಂಚಾಲಕಿ ಪ್ರೊ. ಮಾಲತಿ ಶ್ರೀರಾಮ್, ಗ್ರಂಥಪಾಲಕ ಡಾ.ಎಂ.ವಿ. ಸುನಿಲ್ ಇದ್ದರು.

KP



ಕಾರ್ಯಕ್ರಮದಲ್ಲಿ ಪ್ರಾಧ್ಯಾಪಕ ಡಾ.ಆರ್. ಜಗದೀಶ್ ಇತರರು ಇದ್ದರು.